# ಹೇಳಬೇಡ, ಅದೇ ಆಗಿರು

**ಸಂಗ್ರಹ: ಎನ್. ಗೋಪಿನಾಥ, ಶಿವಮೊಗ್ಗ ; ಚಿತ್ರ: ಬಿ.ಕೆ.ಸೋಮಶೇಖರ್, ಬೆಂಗಳೂರು**



ವಿದೇಹ ರಾಜನಾದ ಜನಕ ಒಮ್ಮೆ ಗಂಗಾನದಿಯ ದಡದಲ್ಲಿ ಒಬ್ಬನೇ ಕುಳಿತು "ಅಹಂ ಬ್ರಹ್ಮಾಸ್ಮಿ" (ನಾನು ಬ್ರಹ್ಮನೇ ಆಗಿದ್ದೇನೆ) ಎಂದು ಜಪಿಸುತ್ತಿದ್ದ. ಆಗ ಅಲ್ಲಿ ಅಕಸ್ಮಾತ್ತಾಗಿ ಬಂದ ಅಷ್ಟಾವಕ್ರ ಮುನಿಗಳು ಅಲ್ಲೇ ನಿಂತು ದಂಡ ಕಮಂಡಲುಗಳನ್ನು ಪ್ರದರ್ಶಿಸುತ್ತ "ಇದು ನನ್ನ ದಂಡ, ಇದು ನನ್ನ ಕಮಂಡಲು" ಎಂದು ಹೇಳತೊಡಗಿದರು. ಜನಕನಿಗೆ ಕಿರಿಕಿರಿಯುಂಟಾಗಿ ಬೇರೆ ಕಡೆಗೆ ಹೋಗಿ ಪುನಃ ತನ್ನ ಮಂತ್ರ ಜಪಿಸತೊಡಗಿದ. ಮುನಿಗಳು ಅಲ್ಲಿಗೂ ಬರಬೇಕೆ! ಬಂದವರು ಹೇಳಿದ್ದನ್ನೇ ಹೇಳಲು ಶುರುಮಾಡಿದರು. ಜನಕನಿಗೆ ಸಹನೆ ಮೀರಿತು. ಅವರನ್ನು ಉದ್ದೇಶಿಸಿ ಹೇಳಿದ: "ಮಹಾ ಮುನಿಗಳೆ, ದಂಡ ಕಮಂಡಲುಗಳು ನಿಮ್ಮವಲ್ಲವೆಂದು ಯಾರೂ ವಿವಾದ ಮಾಡುತ್ತಿಲ್ಲ. ಅವು ನಿಮ್ಮವೇ ಆಗಿವೆ. ಅದನ್ನು ಕೂಗಿಹೇಳುವ ಆವಶ್ಯಕತೆ ಏನಿದೆ?"

ಆಗ ಮುನಿಗಳು ನಗುತ್ತಾ ಹೇಳಿದರು: "ಮಹಾರಾಜ ಜನಕ, ಈ ತರ್ಕ ನಿನಗೂ ಅನ್ವಯಿಸುತ್ತದೆ ಅಲ್ಲವೆ? ನಿನ್ನ ಸ್ವರೂಪ ಬ್ರಹ್ಮವೇ, ಅದನ್ನಾರೂ ಅಲ್ಲಗಳೆಯರು. ಆದರೆ ಪುನಃ ಪುನಃ ಹೇಳುತ್ತಿದ್ದೀಯೆ, **'ಅಹಂ ಬ್ರಹ್ಮಾಸ್ಮಿ'** ಎಂದು. ಆದ್ದರಿಂದ ಬರೀ ಬಾಯಲ್ಲಿ ಹೇಳಬೇಡ. ಅದೇ ಆಗಿರು, ಸಾಕು." ✡

---

**ಮತ್ತಾರೂ ಪ್ರೀತಿಸುವುದಿಲ್ಲ**

ಪುಟ್ಟ ಹುಡುಗಿ ಮನೆಗೆ ಬಂದಿದ್ದ ಅತಿಥಿಯನ್ನು ಕೇಳಿದಳು: "ನನ್ನ ಬಳಿ ಬೇಕಾದಷ್ಟು ಗೊಂಬೆಗಳಿವೆ. ನೀವು ನೋಡುವಿರಾ?" "ಓಹೋ! ಖಂಡಿತವಾಗಿ ನೋಡುತ್ತೇನೆ" ಎಂದರು ಅತಿಥಿಗಳು. ಆ ಬಾಲಕಿ ಕೂಡಲೇ ಕುಣಿಯುತ್ತ ಒಳಗೆ ಓಡಿಹೋದಳು. ತನ್ನ ಕೋಣೆಯಿಂದ ಅನೇಕ ಗೊಂಬೆಗಳನ್ನು ಎತ್ತಿಕೊಂಡು ಬಂದಳು. ಅವುಗಳಲ್ಲಿ ಕೆಲವು ಹೊಸತು, ನೋಡಲು ಬಹಳ ಚೆನ್ನಾಗಿದ್ದವು. ರಾಜ, ರಾಣಿ, ನರ್ತಕಿಯರ ಬೊಂಬೆಗಳಿದ್ದವು. "ಇವುಗಳಲ್ಲಿ ನಿನಗೆ ಅತ್ಯಂತ ಪ್ರಿಯವಾದದ್ದು ಯಾವುದು?" ಎಂದು ಅತಿಥಿ ಕೇಳಿದರು. ರಾಣಿಯ ಮುದ್ದಾದ ಬೊಂಬೆಯನ್ನೇ ಹುಡುಗಿ ಮೆಚ್ಚಿರಬೇಕು ಎಂದು ಅತಿಥಿ ಭಾವಿಸಿದ್ದರು. ಆದರೆ ಅವರಿಗೆ ಆಶ್ಚರ್ಯ ಕಾದಿತ್ತು! ಆ ಬಾಲಕಿ ಚಿಂದಿ ಬಟ್ಟೆಯನ್ನು ಉಡಿಸಿದ್ದ, ಒಂದು ಕೈಯಿಲ್ಲದ, ಮೂಗು ಸೊಟ್ಟಗಿದ್ದ ಗೊಂಬೆಯನ್ನು ಕೈಗೆತ್ತಿಕೊಂಡು, ಪ್ರೀತಿಯಿಂದ ಮುದ್ದಿಸುತ್ತ, "ಇದು ನನಗೆ ಅತ್ಯಂತ ಪ್ರಿಯ" ಎಂದಳು. "ಏಕೆ?" ಎಂದು ತಡೆಯಲಾರದೆ ಪ್ರಶ್ನೆ ಕೇಳಿದರು ಅತಿಥಿ, "ನಿನಗೆ ರಾಣಿಯೇ ಅತ್ಯಂತ ಪ್ರಿಯ ಎಂದು ಭಾವಿಸಿದ್ದೆ!" ಆ ಹುಡುಗಿ ಉತ್ತರಿಸಿದಳು, 'ನಾನು ಈ ಗೊಂಬೆಯನ್ನು ಪ್ರೀತಿಸದಿದ್ದರೆ, ಬೇರೆ ಯಾರೂ ಇದನ್ನು ಪ್ರೀತಿಸಲಾರರು." —ಜೆ.ಪಿ. ವಾಸ್ವಾನಿ.